ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಇಲಾಖೆಯ ಜಮೀನಿನ ವಿಸ್ತೀರ್ಣದ ಬಗ್ಗೆ

9(19): ಶ್ರೀ ನರೇಂದ್ರ ಬಾಬು ಸಿ.ಎ. (ಮಹಾಲಕ್ಷ್ಮೀ ಲೇಔಟ್): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳಲ್ಲಿ ಲಭ್ಯವಿರುವ ಅರಣ್ಯ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣವೆಷ್ಟು? (ವಿವರವಾದ ಮಾಹಿತಿ ನೀಡುವುದು);

ಆ) ಈ ಜಮೀನಿನಲ್ಲಿ ಅರಣ್ಯ ಇಲಾಖೆಗೆ ಅರಣ್ಯ ಸಂಶೋಧನೆಗೆ ಮತ್ತು ಅರಣ್ಯಾಭಿವೃದ್ಧಿ ನಿಗಮಕ್ಕೆ ಸೇರಿರುವ: ನೀಡಿರುವ ಜಮೀನೆಷ್ಟು?(ವಿವರ ನೀಡುವುದು);

ಇ) ಜಮೀನುಗಳಲ್ಲಿ ಒತ್ತುವರಿ ಅತಿಕ್ರಮಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಒತ್ತುವರಿ/ಅತಿಕ್ರಮಣ ತಡೆಗಟ್ಟಲು ತೆಗೆದು ಕೊಂಡಿರುವ ಕ್ರಮವೇನು?

ಶ್ರೀ ಸಿ.ಎಚ್.ವಿಜಯಶಂಕರ್ (ಅರಣ್ಯ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ವ್ಯಾಪ್ತಿಗಳಲ್ಲಿ ಬರುವ ತಾಲ್ಲೂಕುಗಳಲ್ಲಿ ಇರುವ ಅರಣ್ಯ ಪ್ರದೇಶ ವಿಸ್ತೀರ್ಣ ಈ ಕೆಳಕಂಡಂತಿದೆ:

ಬೆಂಗಳೂರು ನಗರ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ವಿಸ್ತೀರ್ಣ
ಬೆಂಗಳೂರು ನಗರ	ಬೆಂಗಳೂರು ಉತ್ತರ	850.77
ಜಿಲ್ಲೆ (ಬೆಂಗಳೂರು	ಬೆಂಗಳೂರು ದಕ್ಷಿಣ	2262.31
ನಗರ ವಿಭಾಗ ಮತ್ತು	ಬೆಂಗಳೂರು ಪೂರ್ವ	1479.59
ಬನ್ನೇರುಘಟ್ಟ	ಆನೇಕಲ್	5979.12
ವಿಭಾಗವು ಸೇರಿದಂತೆ		
	ಒಟ್ಟು	**10571.79**
ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	9190
	ದೇವನಹಳ್ಳಿ	3060

	ಹೊಸಕೋಟೆ	3263
	ನೆಲಮಂಗಲ	4489
	ಒಟ್ಟು	**20002**

ಆ) ಅರಣ್ಯ ಇಲಾಖೆಗೆ ಸೇರಿದ ಅರಣ್ಯ ಸಂಶೋಧನೆ ಮತ್ತು ಅರಣ್ಯ ಅಭಿವೃದ್ಧಿ ನಿಗಮಕ್ಕೆ ನೀಡಿರುವ ಜಮೀನಿನ ವಿವರ ಈ ಕೆಳಕಂಡಂತಿರುತ್ತದೆ.

ಜಿಲ್ಲೆಯ ಹೆಸರು	ಅರಣ್ಯ ಭೂಮಿಯನ್ನು ನೀಡಿರುವ ಸಂಸ್ಥೆಯ ಹೆಸರು	ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ
ಬೆಂಗಳೂರು ನಗರ		
ಬೆಂಗಳೂರು ಗ್ರಾಮಾಂತರ	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ	1875.21
	ಸಂಶೋಧನೆ ವಿಭಾಗ	676.14
	ಒಟ್ಟು	**2551.35**

ಇ)

ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಪ್ರಕರಣಗಳ ಸಂಖ್ಯೆ	ವಿಸ್ತೀರ್ಣ
ಬೆಂಗಳೂರು ನಗರ ಜಿಲ್ಲೆ (ಬೆಂಗಳೂರು) ನಗರ ವಿಭಾಗ ಮತ್ತು ಬನ್ನೇರುಘಟ್ಟ ವಿಭಾಗವು ಸೇರಿದಂತೆ	ಬೆಂಗಳೂರು ಉತ್ತರ	19	18.01
	ಬೆಂಗಳೂರು ದಕ್ಷಿಣ	108	162.82
	ಬೆಂಗಳೂರು ಪೂರ್ವ	132	234.49
	ಆನೇಕಲ್	445	234.61
	ಒಟ್ಟು	**704**	**649.93**
ಬೆಂಗಳೂರು	ದೊಡ್ಡಬಳ್ಳಾಪುರ	178	148.90
ಗ್ರಾಮಾಂತರ	ದೇವನಹಳ್ಳಿ	156	47.94
	ಹೊಸಕೋಟೆ	94	75.27
	ನೆಲಮಂಗಲ	72	149.00
	ಒಟ್ಟು	**500**	**421.11**

ಈ) ಅರಣ್ಯ ಇಲಾಖೆ ಜಮೀನನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ 1963 ರ ಪ್ರಕಾರ ಅರಣ್ಯ ಮೊಕದ್ದಮೆ ದಾಖಲಿಸಿ ನಿಯಮ 64(ಎ) ಪ್ರಕಾರ ನಡವಳಿಯನ್ನು ನಡೆಸಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಅರಣ್ಯ ಭೂಮಿ ಒತ್ತುವರಿಯಾಗದಂತೆ ತಡೆಗಟ್ಟಲು ಅರಣ್ಯ ಪ್ರದೇಶದ ಗಡಿ ಸುತ್ತಲೂ ಕಲ್ಲುಗೋಡೆ ನಿರ್ಮಿಸುವುದು ಹಾಗೂ ಸೋಲಾರ್ ತಂತಿಬೇಲಿ ನಿರ್ಮಾಣ ಮಾಡುವುದರ ಮೂಲಕ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳ ವ್ಯವಸ್ಥೆಯ ಬಗ್ಗೆ

10(27): ಶ್ರೀ ಹ್ಯಾರಿಸ್ ಎನ್. ಎ. ವಿಧಾನಸಭಾ ಸದಸ್ಯರು (ಶಾಂತಿನಗರ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಇ.ಎಸ್.ಐ. ಆಸ್ಪತ್ರೆಗಳೆಷ್ಟು? ಅವುಗಳನ್ನು ಸುವ್ಯವಸ್ಥೆಯಲ್ಲಿಡಲು ರಾಜ್ಯ ಸರ್ಕಾರದ ಹೊಣೆಗಾರಿಕೆಗಳೇನು?

ಆ) ಕೇಂದ್ರ ಸರ್ಕಾರದವರು ಕಳೆದ ಎರಡು ವರ್ಷಗಳಲ್ಲಿ ಇ.ಎಸ್.ಐ. ಆಸ್ಪತ್ರೆಗಳ ಅಭಿವೃದ್ಧಿಗಾಗಿ ಮಂಜೂರು ಮಾಡಿದ ಹಣದ ಮೊತ್ತವೆಷ್ಟು?

ಇ) ಇ.ಎಸ್.ಐ. ಆಸ್ಪತ್ರೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) 08 ಕಾರಾವಿ ಆಸ್ಪತ್ರೆ (ಕಾರಾವಿ ನಿಗಮದ ಮಾದರಿ ಆಸ್ಪತ್ರೆ, ರಾಜಾಜಿನಗರ ಒಳಗೊಂಡಂತೆ) 101 ಕಾರಾವಿ ಚಿಕಿತ್ಸಾಲಯ, 03 ಐ. ಎಂ. ಪಿ. ಚಿಕಿತ್ಸಾಲಯ, 01 ರೋಗ ಪತ್ತೆ ಹಚ್ಚುವ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಈ ಕೆಳಕಂಡ ಪ್ರಮುಖ ಹೊಣೆಗಾರಿಕೆ ರಾಜ್ಯ ಸರ್ಕಾರದ್ದಾಗಿರುತ್ತದೆ.

1. ವಿಮಾದಾರರಿಗೆ ಹಾಗೂ ಅವರ ಕುಟುಂಬದವರಿಗೆ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದು.
2. ವಿಮಾ ರೋಗಿಗಳಿಗೆ ನಿರಂತರ ಔಷಧಿ ಸರಬರಾಜು.
3. ಕಾರಾವಿ ಆಸ್ಪತ್ರೆ/ಚಿಕಿತ್ಸಾಲಯಗಳನ್ನು ಪ್ರಾರಂಭಿಸುವುದು ಹಾಗೂ ಅವುಗಳಲ್ಲಿ ಎಲ್ಲಾ ಸೌಲಭ್ಯವನ್ನು ಒದಗಿಸುವುದು.